## ಇಲ್ಲಿಯವರೆಗೆ...



ಮಹಾವೃಕ್ಷದ ನೆರಳಿನಲ್ಲಿ ಕಲೆಯ ಪಾತ್ರಗಳನ್ನು ಕಲಿತವರು ಸಿನಿಮಾ ತಾರೆಗಳಾಗಿ ಮಿಂಚತೊಡಗಿದರು. ಕಾಳಿಂಗನ ವಂಶದ ಯಮುನಪ್ಪ ಜ್ಞಾನಪೀಠ ಪ್ರಶಸ್ತಿಗೆ ಪರಿತಪಿಸಿದ್ದು, ನಿಟ್ಟುಸಿರುಬಿಟ್ಟದ್ದೂ ವೃಕ್ಷದ ಗಮನಕ್ಕೆ ಬಂದಿತ್ತು. ಹೀಗೆ ಕಾಲ ಉರುಳುತ್ತಾ ಹೋದಂತೆ, ಮಹಾವೃಕ್ಷದ ಬುಡಕ್ಕೆ ಕೊಡಲಿ ಹಾಕುವ ಮತ್ತೊಂದು ಪ್ರಯತ್ನಕ್ಕೆ ಚಾಲನೆ ದೊರೆಯಿತು. ಕೇಂದ್ರ ಮಂತ್ರಿಗಳ ಬಯಕೆಯಂತೆ ಫ್ಲೈಓವರ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಹಾವೃಕ್ಷವನ್ನು ಕಡಿಯುವ ಯೋಜನೆ ರೂಪುಗೊಂಡಿತು. ಆದರೆ, ವೃಕ್ಷದ ಮಹತ್ವ ಅರಿತಿದ್ದ ಮುಖ್ಯಮಂತ್ರಿಗಳು ಅದನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆಸಿದರು. ಆದರೆ, ಮರದ ಸುತ್ತಮುತ್ತ ಇದ್ದ ತಮ್ಮ ಆಸ್ತಿಗೂ ಸಂಚಕಾರ ಬರಬಹುದೆನ್ನುವ ಸಾಧ್ಯತೆಯನ್ನು ಊಹಿಸಿದ ಅವರು, ಮರದ ರಕ್ಷಣೆಯ ಪ್ರಯತ್ನವನ್ನು ಕೈಬಿಡಲು ಮುಂದಾದರು.

ಕಂಪ್ಯೂಟರಿಗೆ, ಅಲ್ಲಿಂದ ತನ್ನ ಹೆಡ್‌ಫೋನಿಗೆ ಸಂಪರ್ಕವನ್ನು ಕಲ್ಪಿಸಿಕೊಂಡಿದ್ದ. ನನ್ನ ಸಂವೇದನೆಗಳನ್ನು ಡಿಕೋಡಿಂಗ್ ಮಾಡುವುದಾಗಿ ಆತ ಹೇಳುತ್ತಿದ್ದ. ನನ್ನ ಕಥೆಯನ್ನು ಹೇಳಬೇಕೆಂದು ಆತ ಕೇಳಿದ್ದರೆ ನಿಮಗೆ ಹೇಳಿದ್ದಕ್ಕಿಂತಲೂ ಅಧಿಕವಾಗಿ ಆತನಿಗೆ ಹೇಳಿಬಿಡುತ್ತಿದ್ದೆ, ಏಕೆಂದರೆ ಆತ ನನ್ನ ಕುರಿತ ವರದಿಯೊಂದನ್ನು ಮುಖ್ಯಮಂತ್ರಿಗಳಿಗೆ ಕೊಡುವವನಿದ್ದ ಎಂಬ ಅರಿವು ನನಗಿತ್ತು. ಮುಖ್ಯಮಂತ್ರಿಯ ಸೂಚನೆಯ ಮೇರೆಗೇ ಆತ ಪರಿಸರ ಇಲಾಖೆಯಿಂದ ನಿಯೋಜಿತನಾಗಿದ್ದನೆಂಬ ಅರಿವು ನನಗೆ ಬರಲು ತಡವಾಗಲಿಲ್ಲ. ಆದರೆ ಆ ಕ್ಷಣ ನನಗೆ ನಾನು ಬದುಕುವುದಕ್ಕಿಂತ ಮನುಕುಲ ಬದುಕುವುದು ಬಹಳ ಮುಖ್ಯವೆನಿಸಿತ್ತು. ಹಿಂದೆ ಸುನಾಮಿ ಬಂದಾಗಲೂ ನಾನು ಇಂಥದೊಂದು ಸೂಚನೆಯನ್ನು ಹೊಮ್ಮಿಸಿದ್ದೆ. ಆದರೆ ಆಗ ನಾನು ಗ್ರಹಿಸಿದ ಭೂಮಿಯಾಳದ ಸದ್ದನ್ನು ಹೊರಜಗತ್ತು ಗ್ರಹಿಸಲಿಲ್ಲ. ಸಮುದ್ರದಲ್ಲಿ ಆದ ಭೂಕಂಪದ ಕಂಪನಗಳು ಒಂದೇ ಕ್ಷಣದಲ್ಲಿ ನನ್ನನ್ನು ತಲುಪಿದ್ದವು. ಅದನ್ನು ಗ್ರಹಿಸುವ ಕಲೆ ಮನುಷ್ಯನಿಗೆ ಸಿದ್ಧಿಯಾಗಿದ್ದರೆ, ಅಲ್ಲಿಂದ ಆ ಅಲೆಗಳು ನೆಲಕ್ಕೆ ಅಪ್ಪಳಿಸಲು ಇದ್ದ ಕಾಲಾವಧಿಯೊಳಗೆ ಜನರನ್ನೆಲ್ಲ ಸುರಕ್ಷಿತ ಸ್ಥಳಗಳಿಗೆ ಸಾಗಿಸಿಬಿಡಬಹುದಾಗಿತ್ತು. ಇರಲಿ. ಈಗ ನಾನು ಸಂವೇದನೆಯೊಂದನ್ನು ಪ್ರಶಾಂತ ನಾಯಕನಿಗೆ ನೀಡುತ್ತಿದ್ದೇನೆ, ಆದರೆ ಆತ ಅದನ್ನು ಡಿಕೋಡಿಂಗ್ ಮಾಡಲು ಸಮರ್ಥನೋ ಅಸಮರ್ಥನೋ ಗೊತ್ತಿಲ್ಲ. ಹಿಂದೆ ಪ್ಲೇಗ್, ಸಿಡುಬು, ದಢಾರ, ಏಡ್ಸ್‌ಗಳು ಏನು ಬಂದು ಮನುಷ್ಯ ಸಂಕುಲವನ್ನು ನಾಶ ಮಾಡಿದವೋ, ಅಂಥದೇ ಮಹಾಮಾರಿಯಾದ ಮತ್ತೊಂದು ಕಾಯಿಲೆ ಪಸರಿಸುತ್ತಿದೆಯೆಂಬುದೇ ಆ ಸೂಚನೆ. ಈ ವೈರಸ್‌ಗಳು ಎಷ್ಟು ಅಪಾಯಕಾರಿಯೆಂದರೆ ಮನುಷ್ಯನೊಳಗೆ ಅದು ತಗುಲಿಹಾಕಿಕೊಳ್ಳುವುದು ಜನಕ್ಕೆ ಗೊತ್ತೇ ಆಗುವುದಿಲ್ಲ. ಅದು ಗೊತ್ತಾಗಲೇ ಹದಿನೈದಿಪ್ಪತ್ತು ದಿನಗಳು ಬೇಕು. ಅಷ್ಟರೊಳಗೆ ಅದು ಮನುಷ್ಯನ ಶ್ವಾಸಕೋಶಗಳನ್ನೆಲ್ಲ ಆವರಿಸಿ ಸಂಪೂರ್ಣ ನಿರ್ನಾಮ ಮಾಡಿಬಿಡುತ್ತದೆ. ಇದಕ್ಕೆ ಮದ್ದೇ ಇಲ್ಲವೇ ಎಂದರೆ, ಇದೆ. ಆದರೆ ಅದು ಮನುಷ್ಯ ಪ್ರಪಂಚದಲ್ಲಿ ಇನ್ನೂ ಆವಿಷ್ಕಾರವಾಗಿಲ್ಲ. ಅದರ ಆವಿಷ್ಕಾರ, ಪರಿಷ್ಕಾರ ಆಗುವ ವೇಳೆಗೆ ಒಂದು ದೊಡ್ಡ ಮಾರಣಹೋಮವೇ ನಡೆದುಹೋಗಿಬಿಟ್ಟಿರುತ್ತದೆ ಎಂಬುದೇ ಆತನಿಗೆ ಗೊತ್ತಿಲ್ಲ.

ಪ್ರಶಾಂತ ನಾಯಕ ನನ್ನ ಸೂಚನೆಯನ್ನು ಡಿಕೋಡಿಂಗ್ ಮಾಡಲು ವಿಫಲನಾದ. ನನ್ನನ್ನು ಕಡಿಯಲು ಹೊರಟಿರುವುದರಿಂದ ಹತಾಶನಾಗಿ ನಾನು ಏನೇನೋ ಬಡಬಡಿಕೆ ಮಾಡುತ್ತಿರಬೇಕೆಂದು ಆತ ಊಹಿಸಿರಬಹುದು. ಆತನ ಸಂಶೋಧನೆ ಕೂಡ ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು. ಸಣ್ಣಪುಟ್ಟ ಸಸ್ಯಗಳ ಅಧ್ಯಯನಕ್ಕೆ ಅದು ಸಾಕಾಗುತ್ತಿತ್ತೇನೋ. ಆದರೆ ಆತನ ಉಪಕರಣಗಳಿಗೆ ಇನ್ನೂ ನನ್ನ ಸಂವೇದನೆಗಳನ್ನು ಸಮರ್ಥವಾಗಿ ಗುರುತಿಸುವಷ್ಟು ಸಾಮರ್ಥ್ಯವಿರಲಿಲ್ಲ. ಆತ ನಾವು ಮರಗಳು, ಗಿಡಗಳು ಕೇವಲ ಸಂಗೀತವನ್ನು ಆಸ್ವಾದಿಸುತ್ತೇವೆ, ಸಂಗೀತ ನಮ್ಮ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ ಇತ್ಯಾದಿಗಳಿಗೆ ಮಾತ್ರ ಸೀಮಿತವಾಗಿತ್ತು. ಕೇವಲ ಶೇಕಡ ಒಂದರಷ್ಟೂ ಆ ಸಸ್ಯ ಡಾಕ್ಟರರಿಗೆ ಗುರುತಿಸುವುದು ಸಾಧ್ಯವಾಗಲಿಲ್ಲ. ಹಾಗೆ ಸಾಧ್ಯವಾಗಿದ್ದಿದ್ದರೆ, ಆ ಕಾಯಿಲೆಗೆ ಇರುವ ಮದ್ದನ್ನೂ ಕೂಡ ನಾನೇ ಹೇಳಿಬಿಡುತ್ತಿದ್ದೆ. ಹಾಗೆ ಹೇಳಿದೆನೆಂದು ಆತ ಯಾರಲ್ಲಾದರೂ ಹೇಳಿದರೂ ಅವರಾದರೂ ಆತನ ಮಾತನ್ನು ನಂಬುತ್ತಿರಲಿಲ್ಲ ಬಿಡಿ. ಬುದ್ಧಿಯಿಲ್ಲದ ಮಂಕನೆಂದು ಅವನನ್ನು ಅಲ್ಲಗಳೆಯದಿರುತ್ತಾರೆಯೇ? ಈ ಭೂಮಿ ಮೇಲೆ ಮೇಲಿನ ಸರ್ವ ಕಾಯಿಲೆಗಳಿಗೂ ನಮ್ಮ ಸಸ್ಯ ಸಂಕುಲದಲ್ಲೇ ಮದ್ದಿದೆ. ಅದನ್ನೇ ಯುನಾನಿ, ಆಯುರ್ವೇದ, ಹೋಮಿಯೋಪತಿ, ಅಲೋಪತಿ ಎಂದು ಅವರವರ ಪದ್ಧತಿಗನುಗುಣವಾಗಿ ಕರೆಯುತ್ತಾರಷ್ಟೇ.

ನನ್ನ ನಿರೀಕ್ಷೆಯಂತೆಯೇ ಪಸರಿಸಿದ ಕಾಯಿಲೆಗೆ ಕೋವಿಡ್19 ಎಂದು ಹೆಸರಿಟ್ಟು ಕರೆದರು. ಆಡು ಮಾತಿನಲ್ಲಿ ಕೊರೊನಾ, ಕರೋನ ಎಂಬ ಸುಂದರವಾದ, ಸಾಧುವಾದ ಹೆಸರಿನಿಂದ ಕರೆದರು. ಆದರೆ ಅದರ ಭೀಕರತೆಗೆ ಅದು ಸರಿಯಾದ ಹೆಸರಾಗಿರಲಿಲ್ಲ. ಪ್ರತಿಯೊಂದು ಭಾಷೆಯ ಪದ ಪ್ರಯೋಗದಲ್ಲಿಯೇ ಅದರ ಉದ್ದೇಶವನ್ನು ಅಳೆಯಬಹುದಾಗಿರುತ್ತದೆ. ಉದಾಹರಣೆಗೆ, ಚಂಡಮಾರುತಗಳಿಗೆ ಹೆಸರಿಡುವಾಗ ಹೇಗೆ ಭೀಕರವಾದ ಅರ್ಥ ಬರುವ ಹೆಸರಿಡುತ್ತಾರಲ್ಲ, ಅದಕ್ಕಿಂತಲೂ ಭೀಷಣವಾದ ಹೆಸರಿಡಬೇಕಾಗಿತ್ತು. ಅಂದರೆ ಅದರ ಭೀಕರತೆಯನ್ನು ಅರಿಯುವಲ್ಲಿಯೂ ಮನುಷ್ಯ ವಿಫಲನಾಗಿದ್ದಾನೆಂದೇ ಅರ್ಥ. ಅಥವಾ ಆವರಿಸುವಾಗ ಅದು ಎಷ್ಟು ಮಧುರವಾಗಿ, ಗೊತ್ತಾಗದಂತೆ ಆವರಿಸುತ್ತದೆಯೆಂದು ಹಾಗೆ ಹೆಸರಿಟ್ಟರೋ ಕಾಣೆ.

ಆ ಕಾಯಿಲೆಯ ಲಕ್ಷಣಗಳನ್ನು ಇನ್ನೂ ಕಂಡುಹಿಡಿಯುತ್ತಿದ್ದಾರೆಯೇ ವಿನಾ ಅದಕ್ಕೆ ಔಷಧಿಯನ್ನು ಕಂಡುಹಿಡಿಯಲಿಕ್ಕಾಗಿಲ್ಲವಂತೆ. ಔಷಧಿಯನ್ನು ಕಂಡುಹಿಡಿಯುವುದು ಕಷ್ಟವೇನೂ ಆಗಿರಲಿಲ್ಲ, ಆದರೆ ತಾವು ಕಂಡುಹಿಡಿದ ಔಷಧಿಗಳನ್ನು ಇನ್ನೇನು ಸಾಯುವವರ ಮೇಲೆ ಪ್ರಯೋಗಿಸಲೂ ನೂರೆಂಟು ವಿಘ್ನಗಳಿವೆ. ಹಾಗೇ ಸತ್ತರೂ ಪರವಾಯಿಲ್ಲ, ಆ ಪ್ರಯೋಗ ವಿಫಲವಾಗಿ ಸತ್ತರು ಎಂಬ ಕಳಂಕ ಬರಬಾರದೆಂಬುದು ಅವರ ಸಿದ್ಧಾಂತ. ಒಂದು ವೇಳೆ ಹಾಗೆ ಸತ್ತರೆ, ಆ ಡಾಕ್ಟರರೇ ತಮ್ಮ ಸಂಬಂಧಿಯನ್ನು ಬೇಕೆಂದೇ ಕೊಂದರೆಂದು ಆತನನ್ನು ಬೇಟೆಯಾಡಿಬಿಡುತ್ತಾರೆ. ಅಂಥ ಮೂರ್ಖರು ಅವರು. ಹಿಂದೆಲ್ಲಾ ಇಷ್ಟೊಂದು ಕಾಯಿಲೆಗಳೇ ಇರಲಿಲ್ಲ. ಈಗ ಕಾಯಿಲೆಗಳ ಸಂಖ್ಯೆ ಡಾಕ್ಟರರ ಸಂಖ್ಯೆಗಿಂತಲೂ ಜಾಸ್ತಿಯಾಗಿದೆ. ಸಣ್ಣಪುಟ್ಟ ತೊಂದರೆಗಳನ್ನೆಲ್ಲ ದೊಡ್ಡ ಕಾಯಿಲೆಗಳೆಂದು ಬಿಂಬಿಸಿ, ಅದಕ್ಕೆ ನೂರೆಂಟು ಪ್ರಯೋಗಗಳನ್ನು ಮಾಡಿ ಜೀವಂತ ಪ್ರಯೋಗಪಶುಗಳನ್ನಾಗಿ ಬಳಸಿಕೊಂಡರೂ ತೆಪ್ಪಗಿರುವ ಮನುಷ್ಯರು ಇಂಥ ಸಂದರ್ಭದಲ್ಲಿ ಮಾತ್ರ ತಮ್ಮ ಸಾಚಾತನವನ್ನು ಹೊರಪ್ರಪಂಚಕ್ಕೆ ಬಿಂಬಿಸಿಕೊಳ್ಳುತ್ತಾರೆ.

ಹಿಂದೆ ಗುರುಪಾದಪ್ಪ ನಾಟಿ ಔಷಧಿ ಕೊಡುತ್ತಿದ್ದನಲ್ಲ, ಆತನ ಮರಿಮೊಮ್ಮಗ ಈಗ ದೊಡ್ಡ ಮನಃಶಾಸ್ತ್ರಜ್ಞನಾಗಿ ಬೆಳೆದಿದ್ದಾನೆ. ಡಾ. ಅಶೋಕಪ್ಪ ಎಂದು ಆತನ ಹೆಸರು. ಅಶೋಕಪ್ಪ ತುಂಬಿದ ಒಂದು ಸಭೆಯಲ್ಲಿ ಮಾತನಾಡುತ್ತಾ: ‘ನಾವು ಡಾಕ್ಟರುಗಳು ನಿಮಗೆ ಚಿಕಿತ್ಸೆ ಪ್ರಾರಂಭಿಸುವ ಮುನ್ನವೇ ನಿಮ್ಮ ಹಣಕಾಸಿನ ಸ್ಥಿತಿಯ ಬಗ್ಗೆ ಕೇಳಿ ತಿಳಿದುಕೊಂಡುಬಿಡುತ್ತೇವೆ. ನಿಮಗೆ ಬರೆದುಕೊಡುವ ಒಂದೊಂದು ಟೆಸ್ಟ್‌ಗಳಿಗೂ ರೆಫರ್ ಮಾಡಿದ ಡಾಕ್ಟರುಗಳಿಗೆ ಮೂವತ್ತು ಪರ್ಸೆಂಟ್ ಕಮಿಷನ್ ಸಿಗುತ್ತದೆ. ಅದಕ್ಕೇ ಅಗತ್ಯವಿಲ್ಲದಿದ್ದರೂ ಏನಾದರೊಂದು ಸಬೂಬು ಹೇಳಿ, ಯಾಕೋ ಅನುಮಾನವಾಗುತ್ತಿದೆ ಇದೊಂದು ಟೆಸ್ಟ್ ಮಾಡಿಸಿಬಿಡಿ, ಎಂದು ಒಂದಾದ ಮೇಲೊಂದರಂತೆ ಟೆಸ್ಟ್ ಮಾಡಿಸುತ್ತೇವೆ. ಒಂದೊಂದು ಪರೀಕ್ಷೆಗೂ ಸಾವಿರಾರು ರೂಪಾಯಿ ಚಾರ್ಜ್ ಮಾಡುತ್ತಾರೆ. ಹಾಗೆ ಪೀಕಿದ ಫೀಜಿನಲ್ಲಿ ಡಾಕ್ಟರರ ಕಮೀಷನ್ನೂ ಸೇರಿರುತ್ತದೆ. ಅದು ತಿಂಗಳಿಗೊಮ್ಮೆ ಪ್ರತಿ ಪ್ರಯೋಗಾಲಯದಿಂದಲೂ